ಸಾಕ್ಷಿಯನ್ನು ದಿಃ 14.09.2021 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**<u>ಮುಂದುವರೆದ ಪಾಟೀ ಸವಾಲುಃ</u> ಶ್ರೀ ಎಮ್ ಎಸ್ ಬಿ ವಕೀಲರಿಂದಃ**

ದಾವಾ ಅನುಸೂಚಿ ಸಿ ಸ್ವತ್ತು ಮೃತ್ಯು ಪತ್ರದಲ್ಲಿ ಇರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮೃತ್ಯು ಪತ್ರದಲ್ಲಿ ನಾನು ಹೇಳಿದಂತೆ ಮಲ್ಲಸಮುದ್ರ, ಲಕ್ಕುಂಡಿ, ಅಸುಂಡಿ ಗ್ರಾಮಗಳಲ್ಲಿ ಇವೆ ಎಂದು ಹೇಳುವ ಆಸ್ತಿಗಳ ಸರ್ವೇ ನಂಬರ, ಕ್ಷೇತ್ರ ಉಲ್ಲೆಖವಿಲ್ಲ ಎಂದರೆ ಸರಿ. ಯಾವ ಯಾವ ಬ್ಯಾಂಕಿನಲ್ಲಿ ಎಷ್ಟು ಎಷ್ಟು ಮೊತ್ತದ ಹಣದ ಯಾವ ಯಾವ ಖಾತೆಯಲ್ಲಿ ಇರುತ್ತವೆ ಎನ್ನುವ ಬಗ್ಗೆ ಮೃತ್ಯು ಪತ್ರದಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿ. ಅದೇ ರೀತಿ ಖಜಾನೆಯಲ್ಲಿಯೂ ಸಹ ಏನು ಇದ್ದವು ಎನ್ನುವ ಬಗ್ಗೆ ಮೃತ್ಯು ಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸರಿ. ನಾನು ಹೇಳುವಂತಹ ಮೃತ್ಯು ಪತ್ರದಲ್ಲಿ ಸ್ವತ್ತುಗಳ ಕ್ಷೇತ್ರ ನಮೂದಿರುವುದಿಲ್ಲ ಎಂದರೆ ಸರಿ. ಅದೇ ರೀತಿ ಮೃತ್ಯು ಪತ್ರದಲ್ಲಿ ಶೇರ್ ಸರ್ಟಿಫೀಕೇಟಗಳ ಸಂಖ್ಯೆ ನಮೂದಿಲ್ಲ ಎಂದರೆ ಸರಿ. ಮೃತ್ಯು ಪತ್ರ ಬರೆದಿರುತ್ತಾರೆ ಎಂದು ಹೇಳುವ ವ್ಯಕ್ತಿಯು ಯಾವ ಯಾವ ಸ್ವತ್ತುಗಳಿಗೆ ಸಂಪೂರ್ಣ ಮಾಲೀಕನಿದ್ದನು ಎಂದು ನನಗೆ ಹೇಳಲು ಬರುವುದಿಲ್ಲ.

ಹಡಪದ ಹಾಗೂ ಕುಂಡೊಳ್ಳಿ ಎನ್ನುವವರು ವ್ಯಾಪಾರಸ್ಥರು ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಹಡಪದ ಹಾಗೂ ಕುಂಡೊಳ್ಳಿ ಇವರು ರಿಯಲ್ ಎಸ್ಟೇಟ್ ವ್ಯಾಪಾರಸ್ಥರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತುಗಳ ದಾಖಲೆಗಳನ್ನು ಬಸವರಾಜ ಹಡಪದ ಎನ್ನುವವರು ತಂದು ಕೊಟ್ಟಿರುತ್ತಾರೆ. ಸದರಿ ಹಡಪದ ಗದಗಿನಿಂದ ದಾಖಲೆಗಳನ್ನು ತಂದು ಕೊಟ್ಟಿರುತ್ತಾರೆ. ಯಾವ ಸ್ಥಳದಿಂದ ದಾಖಲೆಗಳನ್ನು ತಂದು ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಹಡಪದ ಇವರಿಗೆ ಸ್ವತ್ತುಗಳ ವಿವರಣೆಗಳ ಬಗ್ಗೆ ಮಾಹಿತಿಯ ಬಗ್ಗೆ ನನಗೆ ಗೊತ್ತಿಲ್ಲ. ನಾನು ಹೇಳುವಂತಹ ಮೃತ್ಯು ಪತ್ರದಲ್ಲಿ ನನ್ನ ಪತಿಯು ಅನಾರೋಗ್ಯದಿಂದ ಇದ್ದರು ಎಂದರೆ ಸರಿ. ಮೃತ್ಯು ಪತ್ರ ವನ್ನು ಬರೆಯಲು ನನ್ನ ಪತಿಗೆ ವೈದ್ಯರು ದೃಢಿಕರಿಸಿದ್ದರು ಅಥವಾ ಇಲ್ಲ ಎಂದು ನನಗೆ ಗೊತ್ತಿಲ್ಲ. ಮೃತ್ಯು ಪತ್ರ ನನ್ನ ಕೈಗೆ ಕೊಟ್ಟ ನಂತರ ನಾನು ವೈದ್ಯರನ್ನು ವಿಚಾರಣೆ ಮಾಡಿಲ್ಲ. ಈ ದಿನದವರೆಗೂ ವೈದ್ಯರನ್ನು ನಾನು

ವಿಚಾರಣೆ ಮಾಡಿಲ್ಲ. ನನ್ನ ಪತಿಯು ಮೃತ್ಯು ಪತ್ರವನ್ನು ಬರೆದುಕೊಡುವಂತಹ ಮಾನಸಿಕ ಹಾಗೂ ದೈಹಿಕ ಸ್ಥಿತಿಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನನಗೆ ತಿಳುವಳಿಕೆ ಇದ್ದ ಹಾಗೇ ನನ್ನ ಪತಿ ಕೆಲವೊಂದು ಬಳಿ ರುಜು ವನ್ನು ಮಾಡುತ್ತಿದ್ದರು ಹಾಗೂ ಕೆಲವೊಂದು ಬಳಿ ಹೆಸರನ್ನು ಬರೆಯುವ ಮೂಲಕ ರುಜು ಮಾಡುತ್ತಿದ್ದರು. ನನ್ನ ಪತಿ ರುಜು ಮಾಡಿದರೆ ಹೆಸರು ಬರೆಯುತ್ತಿರಲಿಲ್ಲ ಹಾಗೂ ಹೆಸರು ಬರೆದರೆ ರುಜು ಮಾಡುತ್ತಿರಲ್ಲಿಲ ಎಂದರೆ ಸರಿಯಲ್ಲ. ನನ್ನ ಪತಿ ರುಜು ಹಾಗೂ ಹೆಸರು ಇವುಗಳನ್ನು ಒಳಗೊಂಡಂತೆ ತೋರಿಸುವ ದಾಖಲೆಗಳನ್ನುಹಾಜರು ಪಡಿಸಿಲ್ಲ ಎಂದರೆ ಸರಿ. ನನ್ನ ಪತಿ ಮೃತ್ಯು ಪತ್ರದಲ್ಲಿ ಯಾವ ರೀತಿ ರುಜು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಹಾಗೂ ಮೃತ್ಯು ಪತ್ರಕ್ಕೆ ರುಜು ಮಾಡಿದ ಸಾಕ್ಷಿದಾರರು ಎಲ್ಲರೂ ಸೇರಿಕೊಂಡು ಪ್ರತಿವಾದಿಯರ ಸ್ವತ್ತುಗಳನ್ನು ಕಬಳಿಸುವ ಉದ್ದೇಶದಿಂದ ಮೃತ್ಯು ಪತ್ರ ವನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಮೃತ ನನ್ನ ಪತಿಯು ಮೃತ್ಯು ಪತ್ರಕ್ಕೆ ರುಜು ಮಾಡಿಲ್ಲ ಎಂದರೆ ಸರಿಯಲ್ಲ. ಅವನು ರುಜುವನ್ನು ನಾವು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಮೃತ ವ್ಯಕ್ತಿಗೆ ಮೃತ್ಯು ಪತ್ರ ಬರೆಯುವಂತಹ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ.

ದಾವಾ ಸ್ವತ್ತಿಗಳಿಗೆ ಸಂಬಂಧಿಸಿದಂತೆ ಪ್ರತಿವಾದಿಯರು ನಮ್ಮ ವಿರುದ್ದ ಪಾಲು ವಿಭಾಗ ಕೋರಿ ಒ ಎಸ್ ನಂ. 147/2015 ದಾಖಲಿಸಿರುತ್ತಾರೆ ಎಂದರೆ ಸರಿ. ದಾವಾ ಸ್ವತ್ತಿಗಳಿಗೆ ಸಂಬಂಧಿಸಿದಂತೆ ನಾನು ಹೇಳಿದಂತೆ ಕುಟುಂಬದಲ್ಲಿ ಯಾವುದೇ ಪಾಲು ವಿಭಾಗವಾಗಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ವಯಸ್ಸಾಗಿರುವುದನ್ನು ದುರ್ಲಾಭವನ್ನು ಪಡೆದುಕೊಂಡು ಅವರಿಗೆ ದಾವಾ ಸ್ವತ್ತುಗಳಲ್ಲಿ ಹಕ್ಕನ್ನು ಕೊಡಬಾರದು ಎನ್ನುವ ಉದ್ದೇಶದಿಂದ ಸುಳ್ಳು ಮೃತ್ಯು ಪತ್ರವನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಗದಗ.